**ಓ ಎಸ್ 145/2023 ಡಿಡಬ್ಲ್ಯೂ.4**

**ಸಾಕ್ಷಿಯನ್ನು ದಿಃ 08.04.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಡಿ ಟಿ ವಿ ವಕೀಲರಿಂದಃ ಡಿ ಡಬ್ಲ್ಯೂ.2 ಮತ್ತು 3 ರವರ ಪಾಟೀ ಸವಾಲನ್ನು ಅಳವಡಿಸಿಕೊಂಡು ಮುಂದುವರಿದ ಪಾಟೀ ಸವಾಲುಃ**

ತಿರುಮಲೇಗೌಡರಿಗೆ 4 ಜನ ಗಂಡು ಮಕ್ಕಳು, ಒಂದು ಹೆಣ್ಣು ಮಗು. ಅವರ ಕುಟುಂಬಕ್ಕೆ ಎಷ್ಟು ಆಸ್ತಿಗಳು ಇವೆ ಎಂಬುದು ಮತ್ತು ಅವರ ಕುಟುಂಬದ ವ್ಯವಹಾರಗಳು ನನಗೆ ಗೊತ್ತಿದೆ. ದಾವಾ ಷೆಡ್ಯೂಲ್ ನಲ್ಲಿ 7-8 ಆಸ್ತಿಗಳು ಇರಬಹುದು, ಆದರೆ ನಿಖರವಾಗಿ ಗೊತ್ತಿಲ್ಲ. ದಾವಾ ಷೆಡ್ಯೂಲ್ ಆಸ್ತಿಗಳ ಪೈಕಿ ಕೆಲವು ಆಸ್ತಿಗಳ ವಿಸ್ತೀರ್ಣ ಮತ್ತು ಚಕ್ಕು ಬಂದಿ ಮಾತ್ರ ಗೊತ್ತಿದೆ. ಸರ್ವೆ ನಂ. 27/2 ರಲ್ಲಿ 2 ಎಕರೆ 0.23 ಗುಂಟೆ ಇದೆ. ಸರ್ವೆ ನಂ. 12/10 ರಲ್ಲಿ 1 ಎಕರೆ 0.02 ಗುಂಟೆ ಇದೆ. ಸರ್ವೆ ನಂ. 12/8 ರಲ್ಲಿ 0.12 ಗುಂಟೆ ಇದೆ. ಉಳಿದ ಸ್ವತ್ತುಗಳ ಸರ್ವೆ ನಂಬರು ಹಾಗೂ ವಿಸ್ತೀರ್ಣ ನನಗೆ ನೆನಪಿಲ್ಲ. ದಾವಾ ಷೆಡ್ಯೂಲ್ ಆಸ್ತಿಗಳ ಆರ್ ಟಿ ಸಿ ಗಳನ್ನು ನೋಡಿದ್ದೇನೆ, ಬೇರೆ ದಾಖಲೆಗಳನ್ನು ನೋಡಿಲ್ಲ. ದಾವಾ ಷೆಡ್ಯೂಲ್ ಆಸ್ತಿಗಳು ವಾದಿ ಮತ್ತು ಪ್ರತಿವಾದಿಗಳಿಗೆ ಜಂಟಿಯಾಗಿ ಪೌತಿ ಖಾತೆಯಾಗಿದೆ ಎಂದರೆ ಸರಿ. ಅಂದರೆ ಅವರ ತಂದೆ ತಿರುಮಲೇಗೌಡರ ಮರಣಾ ನಂತರ ಪೌತಿ ಖಾತೆ ಆಗಿದೆ ಎಂದರೆ ಸರಿ.

1990 ರಲ್ಲಿ ತಿರುಮಲೇಗೌಡರು ಬದುಕಿದ್ದಾಗ ವಿಭಾಗ ಆಗಿದೆ. ಆ ವಿಭಾಗ ಆದ ಸಮಯದಲ್ಲಿ ಅವರ ಕುಟುಂಬಸ್ಥರು ಹಾಗೂ ನಮ್ಮ ಗ್ರಾಮದ ಸುಮಾರು 7-8 ಜನರು ಇದ್ದರು. ಆ ಪೈಕಿ ನಾವು 3 ಜನರು ಈಗ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿದ್ದೇವೆ, ಉಳಿದವರ ಪೈಕಿ ಇಬ್ಬರು ತೀರಿಕೊಂಡಿದ್ದಾರೆ. 1990 ರಲ್ಲಿ ವಿಭಾಗ ಆದ ಸಮಯದಲ್ಲಿ ಸುಮಾರು 7-8 ಜನರು ಇದ್ದರು ಎಂಬುದನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಿ ಹೇಳಿಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ಇದುವರೆವಿಗೂ ಯಾವುದೇ ವಿಭಾಗ ಏರ್ಪಡದೆ ಇದ್ದರೂ ಸಹ ಪ್ರತಿವಾದಿಗಳಿಗೆ ಸಹಾಯ ಮಾಡುವ ಸಲುವಾಗಿ ಅವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ.  ವಾದಿ ತಿಮ್ಮೇಗೌಡರಿಗೆ ಸೇರಬೇಕಾದ ಆಸ್ತಿಯನ್ನು ತಪ್ಪಿಸುವ ಸಲುವಾಗಿ ಪ್ರತಿವಾದಿಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ಒಂದು ವೇಳೆ ನಾನು ಹೇಳಿದ ಹಾಗೂ 1990 ರಲ್ಲಿ ವಿಭಾಗ ಆಗದಿದ್ದರೆ ವಾದಿ ಮತ್ತು ಪ್ರತಿವಾದಿಗಳ ಹೆಸರಿಗೆ ದಾವಾ ಆಸ್ತಿಗಳು ತಿರುಮಲೇಗೌಡರ ಮರಣಾ ನಂತರ ಪೌತಿ ಜಂಟಿ ಖಾತೆ ಆಗದೆ ವಿಭಾಗದ ಅನುಸಾರ ಆಗುತ್ತಿತ್ತು ಎಂದರೆ ಕಂದಾಯ ದಾಖಲೆಗಳು ತಿದ್ದುಪಡಿಯಾಗಬೇಕಾಗಿದ್ದ ಕಾರಣ ಮತ್ತು ವಾದಿ ಮತ್ತು ಪ್ರತಿವಾದಿಗಳು ವಿಭಾಗ ಪತ್ರ ಮುಂದೆ ಬರದ ಕಾರಣ ಜಂಟಿ  ಖಾತೆಯಾಗಿದೆ. ಒಂದು ವೇಳೆ ವಿಭಾಗ ಆಗದಿದ್ದರೆ ಆ ಸಂಬಂಧ ಯಾವುದಾದರೂ ಪಾಲುಪಟ್ಟಿ ಆಗಿರುತ್ತಿತ್ತು ಮತ್ತು ಹಾಗೆ ವಿಭಾಗ ಆಗದೆ ಇರುವ ಕಾರಣ ಅಂತಹ ಯಾವುದೇ ಪಾಲುಪಟ್ಟಿ ಆಗಿಲ್ಲ ಎಂದರೆ ಸರಿಯಲ್ಲ.

ವಾದಿ ತಿಮ್ಮೇಗೌಡರು ಅವರ ತಮ್ಮಂದಿರಾದ ಸಣ್ಣೇಗೌಡ ಮತ್ತು ವೆಂಕಟೇಶರವರಿಗೆ ಸರ್ವೆ ನಂ. 27/2 ರಲ್ಲಿ  ತಲಾ 0.10 ಗುಂಟೆ, ಸರ್ವೆ ನಂ. 12/2 ರಲ್ಲಿ  ತಲಾ 0.05 ಗುಂಟೆ,  ಸರ್ವೆ ನಂ. 2/8 ರಲ್ಲಿ ತಲಾ 0.02 ಗುಂಟೆ ಮಾರಾಟ ಮಾಡಿದ್ದಾರೆ.  ಈ ವಿಚಾರವನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿ ಹೇಳಿದ್ದೇನೆ.  ಹಾಗೆ ಮಾರಾಟ ಮಾಡಿದ ಸಂಬಂಧ ದಾಖಲೆಗಳನ್ನು ನಾನು ನೋಡಿಲ್ಲ.  ಮಾರಾಟ ಮಾಡಿದ ಬಗ್ಗೆ  ಕ್ರಯಪತ್ರ ಇಲ್ಲ, ಆದರೆ ಒಂದು ಪತ್ರದಲ್ಲಿ ಬರೆದು ಕೊಟ್ಟಿದ್ದಾರೆ.  ಪತ್ರವನ್ನು ಪಂಚಾಯಿತಿ ಮೂಲಕ ತಿಮ್ಮೇಗೌಡರು ಬರೆದುಕೊಟ್ಟಿದ್ದಾರೆ. ಆ ಸಂಗತಿಯನ್ನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿ ಹೇಳಿಲ್ಲ. ಹಾಗೆ ಹೇಳಲುಯಾವುದೇ ತೊಂದರೆ ಇಲ್ಲ. ಆ ಜಮೀನುಗಳನ್ನು ಯಾರು ಎಷ್ಟೆಷ್ಟು ಹಣಕ್ಕೆ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.  ವಾದಿ ತಿಮ್ಮೇಗೌಡರು ಆ ಜಮೀನುಗಳನ್ನು ಮಾರಾಟ ಮಾಡದೆ ಇದ್ದರೂ ಸಹ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಜಮೀನುಗಳನ್ನು ಪ್ರತಿವಾದಿಗಳಿಗೆದಕ್ಕಿಸಬೇಕು ಎಂಬ ಕಾರಣದಿಂದ ಪ್ರತಿವಾದಿಗಳ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ವಾದಿಯು ತನ್ನ

ಮಗಳ ಮದುವೆಗಾಗಿ ಅಥವಾ ಮಗಳು ಜಮೀನು ಖರೀದಿಸಲು ವಾದಿಯು ಯಾರಿಂದಲೂ ಸಹ ಹಣ ಪಡೆದುಕೊಂಡಿಲ್ಲ ಮತ್ತು ಜಮೀನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಗೋವಿಂದೇಗೌಡರಿಗೆ ಯಾವ ಜಮೀನು ಮಂಜೂರಾಗಿದೆ ಎಂದು ಹೇಳುತ್ತಿದ್ದೆನೆಯೋ ಆ ಜಮೀನು ಒಟ್ಟು ಕುಟುಂಬದ ಜಮೀನು ಎಂದರೆ ಸರಿಯಲ್ಲ. ಗೋವಿಂದೇಗೌಡರು ಯಾವ ಸರ್ವೆ ನಂಬರ್ ಜಮೀನಿನಲ್ಲಿ ಮನೆ ಕಟ್ಟಿದ್ದಾರೆಯೋ ಆ ಜಮೀನು ಒಟ್ಟು ಕುಟುಂಬದ ಜಮೀನು.

ಗೋವಿಂದೇಗೌಡರಿಗೆ ಮಂಜೂರಾಗಿದೆ ಎಂದು ಹೇಳುತ್ತಿರುವ ಸರ್ವೆ ನಂ. 9 ರ ಜಮೀನು ಒಟ್ಟು ಕುಟುಂಬದ ಆಸ್ತಿಯಾಗಿದ್ದು ಅದರಲ್ಲಿ ಎಲ್ಲರಿಗೂ ಭಾಗಾಂಶದ ಹಕ್ಕು ಇದ್ದರೂ ಸಹ ವಾದಿಗೆ ಆ ಜಮೀನಿನಲ್ಲಿ ಭಾಗಾಂಶದ ಹಕ್ಕನ್ನು ತಪ್ಪಿಸುವ ಸಲುವಾಗಿ ಪ್ರತಿವಾದಿಗಳ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಗೋವಿಂದೇಗೌಡರು ಮನೆ ಕಟ್ಟಿಕೊಂಡಿರುವ ಜಾಗ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದಲ್ಲಿ ವಿಭಾಗ ಆಗಿರುವ ಬಗ್ಗೆ ನಾನು ಯಾವುದೇ ದಾಖಲೆಯನ್ನು ನೋಡದೆ ಇದ್ದರೂ ಮತ್ತು ಅಂತಹ ಯಾವುದೇ ವಿಭಾಗ ಆಗದೆ ಇದ್ದರೂ ಪ್ರತಿವಾದಿಗಳಿಗೆ ಸಹಾಯ ಮಾಡಲು ಅವರ ಮಾತು ಕೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ತಿಮ್ಮೇಗೌಡರಿಗೆ ಆಸ್ತಿ ಬರಬಾರದು ಎಂದು ಮೋಸ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಣ ಪಡೆದುಕೊಳ್ಳದೆ ಇದ್ದರೂ ಸಹ ಪ್ರತಿವಾದಿಗಳ ಮಾತು ಕೇಳಿಕೊಂಡು ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಗೋವಿಂದೇಗೌಡರಿಗೆ ಬಂದಿದೆ ಎಂದು ಹೇಳುತ್ತಿರುವ ಗೋಮಾಳ ಭೂಮಿಯು ಸಹ ಒಟ್ಟು ಕುಟುಂಬದ ಆಸ್ತಿ ಎಂದರೆ ಇರಬಹುದು. ಗೋವಿಂದೇಗೌಡರು ಮನೆ ಕಟ್ಟಿಕೊಂಡಿರುವ ಜಾಗ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ವಾದಿ ಮತ್ತು

ಪ್ರತಿವಾದಿಗಳ ಕುಟುಂಬದಲ್ಲಿ ವಿಭಾಗ ಆಗಿರುವ ಬಗ್ಗೆ ನಾನು ಯಾವುದೇ ದಾಖಲೆಯನ್ನು ನೋಡದೆ ಇದ್ದರೂ ಮತ್ತು ಅಂತಹ ಯಾವುದೇ ವಿಭಾಗ ಆಗದೆ ಇದ್ದರೂ ಪ್ರತಿವಾದಿಗಳಿಗೆ ಸಹಾಯ ಮಾಡಲು ಅವರ ಮಾತು ಕೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ತಿಮ್ಮೇಗೌಡರಿಗೆ ಆಸ್ತಿ ಬರಬಾರದು ಎಂದು ಮೋಸ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**